15



ಇಲಾಖೆ / ವಿಷಯ : DEPARTMENT / SUBJECT: ಮಾನ್ಯ ಮುಖ್ಯಮಂತ್ರಿಯವರು

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 05/03/2020

# ಅಗ್ನಿಪರೀಕ್ಷೆಯಲ್ಲಿ ಗೆದ್ದಿರುವ ಪೌರಶಾಸನಕ್ಕೆ ತಕರಾರು ಬೇಡ

ಸಂ.ಕ 5/3/20

ವಿಧಾನಸಭೆ: ಸಂಸತ್ತಿನಲ್ಲಿ ಅನುಮೋದನೆಗೊಂಡು ಹೊರಬಂದ ಪೌರಶಾಸನ ತಿದ್ದುಪಡಿ ಬಗ್ಗೆ ಚರ್ಚೆ, ಗದ್ದಲ ಅನಗತ್ಯ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸಂವಿಧಾನದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಂವಿಧಾನದ ಅಡಿಯಲ್ಲಿ ಬರುವ ಸಂಸತ್ತಿಗೆ ನಾವೆಲ್ಲರೂ ಗೌರವ ಕೊಡಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ನಾಯಕರು ಸೇರಿದಂತೆ ನಾವೆಲ್ಲರೂ ಇದನ್ನು ಮರೆತಿದ್ದೇವೆಯೇ? ನಮಗೆ ನಾವೇ ಪ್ರಶ್ನೆ ಹಾಕಿಕೊಳ್ಳುವ ಸಮಯ ಬಂದಿದೆಯೇ?

ನಮ್ಮದು ಶ್ರೇಷ್ಠ ಸಂವಿಧಾನ. ಅದು ಹಳಸಲು ಆಗುವುದಿಲ್ಲ. ಯಾವತ್ತೂ ಚಲನಶೀಲ. ಇತ್ತೀಚಿಗೆ ಸಂವಿಧಾನವನ್ನು ಬದಲಿ ಮಾಡಲಾಗುತ್ತದೆ ಎಂಬ ಕೂಗು ಎಲ್ಲೆಡೆ ಎದ್ದಿದೆ. ಅದು ಸಾಧ್ಯವೇ ಇಲ್ಲ. ಸಂವಿಧಾನದ ಮೂಲ ಆಶಯಗಳಿಗೆ ಯಾವತ್ತೂ ಧಕ್ಕೆ ಬರುವುದಿಲ್ಲ. ಈ ಹಿಂದೆ 1975 ರಲ್ಲಿ ಇಂಥದ್ದೇ ಘಟನೆ ನಡೆಯಿತು ಆದರೆ ಅದು ಸಫಲವಾಗಲಿಲ್ಲ. ಒಂದು ವೇಳೆ ಸಂವಿಧಾನದಲ್ಲಿ ರಾಜಕೀಯ ದುರುಪಯೋಗವಾದರೆ ಅದನ್ನು ಪರಿಷ್ಕರಿಸುವ ಅಧಿಕಾರ ಸಂಸತ್ತಿಗೆ ಇದೆ ಇದನ್ನು



ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ದೇಶಕ್ಕಾಗಿ ನಾನು ಎಂಬ ಮಾತು ಇತ್ತು. ಸ್ವಾತಂತ್ರ್ಯ ಬಂದಮೇಲೆ ದೇಶವಿರುವುದೇ ನಮಗಾಗಿ ಎಂದು ಹೇಳುತ್ತಾರೆ. ಸ್ವಾತಂತ್ರ್ಯ ಬಂದು ಇಷ್ಟುವರ್ಷಗಳಾದವರು. ರೈತರು, ಶೋಷಿತರು, ದಲಿತರ ಮೇಲೆ ನಡೆಯುವ ದೌರ್ಜನ್ಯಗಳು ನಿಂತಿವೆಯೇ?

ಎಲ್ಲೆಡೆ ವರ್ಗಾವಣೆ ಎನ್ನುವುದು ಪೆಡಂಭೂತವಾಗಿ ಬೆಳೆದಿದೆ. ಇದು ಭ್ರಷ್ಟಾಚಾರಕ್ಕೆ ಮೂಲಕಾರಣವಾಗಿದೆ. ಕಾಲಕಾಲಕ್ಕೆ ಎಲ್ಲ ಸರ್ಕಾರಗಳು ಇದನ್ನು ತಡೆಯಬೇಕು ಎಂದರೆ ಪೂರ್ಣಪ್ರಮಾಣದಲ್ಲಿ ಸಾಧ್ಯವಾಗುತ್ತಿಲ್ಲ. ಮಹಿಳೆಯರು ಮುಕ್ತವಾಗಿ ಓಡಾಡಲು ಆಗುತ್ತಿಲ್ಲ. ಇವೆಲ್ಲವುಗಳಿಗೆ ಮುಕ್ತಿ ಎನ್ನುವುದು ಇಲ್ಲವೇ? ನಾನೂ ಸೇರಿದಂತೆ ಎಲ್ಲ ಜನಪ್ರತಿನಿಧಿಗಳು ಜವಾಬ್ದಾರಿ ತೆಗೆದುಕೊಂಡು ಇದನ್ನೆಲ್ಲ ಹೋಗಲಾಡಿಸುವ ಪಣ ತೊಡಬೇಕಾಗಿದೆ. ಇಂತಹ ಯೋಚನೆ ಮಾಡುವ ಪರ್ವಕಾಲ ಇದಾಗಿದೆ.

ಡಾ. ಬಿ.ಆರ್. ಅಂಬೇಡ್ಕರ್ ಅವರ ದೇಶಭಕ್ತಿ, ಬದ್ಧತೆ, ತುಳಿತಕ್ಕೊಳಗಾದ ಜನರಿಗೆ ಸಂವಿಧಾನದ ಹಕ್ಕು ಸಿಗಬೇಕು ಅವರ ಬದುಕು ಹಸನಾಗಬೇಕು ಎನ್ನುವ ಅವರ ಕನಸು ಎಷ್ಟರಮಟ್ಟಿಗೆ ನನಸಾಗಿದೆ? ಅವರು ಗಂಭೀರ ಚಿಂತನೆ ಮಾಡಿ ಮತದಾನದ ಹಕ್ಕು ನೀಡಿದರು. ಅವರು ಆಗ ಕಷ್ಟಪಡದಿದ್ದರೆ ನಮಗೆ ಶ್ರೇಷ್ಠ ಸಂವಿಧಾನ ಸಿಗುತ್ತಿರಲಿಲ್ಲ. ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡಿ ಸರ್ಕಾರ ರಚಿಸಿದ ಉದಾಹರಣೆಗಳೂ ಇವೆ.

ಸಂವಿಧಾನದ ಚೌಕಟ್ಟಿನಲ್ಲಿ ರಾಜ್ಯಕ್ಕೆ, ಜನರಿಗೆ ಒಳಿತಾಗುವ ಅಂಶಗಳಿದ್ದರೆ ವಿರೋಧ ಪಕ್ಷದವರೂ ಸೇರಿದಂತೆ ಎಲ್ಲರೂ ನನಗೆ ಸಲಹೆಕೊಡಿ ನಾನು ತಲೆಬಾಗಿ ಮಾಡುತ್ತೇನೆ. ನನಗೆ ರಾಜ್ಯ, ರಾಜ್ಯದ ಜನರ ಅಭಿವೃದ್ಧಿ ಮುಖ್ಯ ಎಂದು ಹೇಳಿದರು.